ನೋಡಪಾ... ಅದಕ್ಕ ಅವರನೂ ತುಸು ಕೇಳಬೇಕಾಗತದ. ಪಂಚಾಯತಿ ಕಟ್ಟಿಗೆ ಕುಂತು ಮಾತಾಡೋಣು...' ಮರ್ಮಕ್ಕೆ ಮುಟ್ಟುವ ಅವನ ಮಾತುಗಳಿಂದ ನಾಗರಾಜನಿಗೆ ಒಂದು ರೀತಿಯ ಅವಮಾನವಾಗಿತ್ತು. ಮಾವನ ಮಾತಿನ ಅರ್ಥವಾದರೂ ಏನು? ಸಾವಿರ ಮಂದಿಯನ್ನು ಕರೆದುಕೊಂಡು ಬಂದರೂ ತನ್ನ ನಿರ್ಧಾರ ಮಾತ್ರ ಇದೇ, ಅದು ಎಂದೆಂದೂ ಬದಲಾಗುವುದಿಲ್ಲ ಎನ್ನುವುದೇ ಇರಬೇಕು. 'ಇದss ಕೊನಿ ಅಂತ ತಿಳ್ಯಾಕ ಹೋಗಬ್ಯಾಡ...' ಎಂದು ಅವನು ಪದೇಪದೇ ಒತ್ತಿ ಕೊಟ್ಟು ಹೇಳುವಾಗ 'ಇದ ನನ್ನ ಕಡೀ ಮಾತು ನೋಡು... ಏನ ಮಾಡಾಂವ... ನಿನ್ನಂತವರನ್ನ ಬಾಳ ನೋಡೇನಿ... ಹೋಗೋ ಬಿಕನಾಸಿ' ಎಂದು ಹೇಳಿದಂತೆಯೇ ತನಗೆ ಕೇಳಿಸುತ್ತಿತ್ತು.

ಅಬ್ಬಾ! ಮಾವನ ಮಾತುಗಳೆ! ಪ್ರತಿಸಲ ಬಂದಾಗಲೂ ಅವನ ಕಾಲಿಗೆ ತಾನು ನಮಸ್ಕಾರ ಮಾಡಿಹೋಗುತ್ತಿದ್ದೆ. ತಾಯಿಯ ಚರಣಗಳಿಗೆರಗದ ದಿನವಿರಬಹುದಿತ್ತು. ಆದರೆ ಸೋದರಮಾವನ ಕಾಲಿಗೆ ಹಣೆ ಹಚ್ಚದ ದಿನವಿರಲಿಲ್ಲ. ಹೆಂಡತಿಗೆ ಇಂತಹುದೆಲ್ಲ ಇಷ್ಟವಾಗುತ್ತಿರಲಿಲ್ಲ. ಆದರೂ ಗಂಡ ಬೈಯುತ್ತಾನೆಂದು ಮನಸ್ಸಿದ್ದೋ ಮನಸ್ಸಿಲ್ಲದೆಯೋ 'ಕಾಕಾ, ಕಾಲು ಕೊಡ್ರಿ' ಎಂದು ಕಾಲಿಗೆರಗುತ್ತಿದ್ದಳು. ತಾನು ಗಂಡನ ಮಾತನ್ನು ಕೇಳಬಾರದಾಗಿತ್ತೆಂದು ಅವಳಿಗೆ ಆಮೇಲೆ ಅನಿಸುತ್ತಿತ್ತು. ಊರಿಗೆ ಬಂದಾಗಲೊಮ್ಮೆ ಶಂಕರಪ್ಪಮಾವ ಹೇಳಿಯೇ ಹೇಳುತ್ತಿದ್ದ: 'ದೀಪಕ್ಕ, ನಿನ್ನ ಗಂಡನ್ನ ನಾನss ಬೆಳೆಸೇನಿ. ಅಂವಗ ಇಷ್ಟು ದೊಡ್ಡ ನೌಕರಿ ಬರಲಿಕ್ಕೆ ನಾನss ಕಾರಣ. ನಾವೆಲ್ಲ ಕಷ್ಟಪಟ್ಟು ಅವನನ್ನ ಮುಂದ ತಂದ್ವಿ. ಅದರ ಪ್ರತಿಫಲಾನ ನೀನು ಉಣ್ಣಲಿಕ್ಕೆ ಹತ್ತೀದಿ.' ಒಂದು ಅನ್ನಿಸಿಕೊಂಡು, ಎರಡು ಅನ್ನಿಸಿಕೊಂಡು ಅವಳಿಗೆ ಸಾಕಾಗಿತ್ತು. ಒಂದು ಸಲ ಆಕೆ ತಿರುಗಿ ಅಂದಿದ್ದಳು: 'ನಿಮ್ಮ ಅಳಿಯ ನನಗ ಸಿಗಲಿಲ್ಲಂದ್ರ ನಾಯೇನು ಮದ್ವಿಯಾಗ್ತಿರಲಿಲ್ಲ ಅಂತ ತಿಳಕೊಂಡಿರೇನು? ನಿಮ್ಮ ಅಳ್ಯಾನಕಿಂತ ನನ್ನ ಪಗಾರ ಜಾಸ್ತಿ ಐತಿ, ಇದು ನಿಮಗ ಗೊತ್ತಿರಲಿ.' ಆವತ್ತಿನಿಂದ ಅವಳ ಮತ್ತು ಮಾವನ ನಡುವಿನ ಮಾತು ನಿಂತುಹೋಯಿತು. ತನ್ನ ಮತ್ತು ಅವನ ನಡುವಿನ ಕಂದಕವಂತೂ ಮತ್ತಷ್ಟು ಆಳವಾಯಿತು. ಅದಷ್ಟೇ ಅಲ್ಲ, ಬಿರುಕುಗಳು ಈಗ ಗಂಡ ಹೆಂಡತಿಯ ಮಧ್ಯೆಯೂ ಕಾಣಿಸಿಕೊಳ್ಳತೊಡಗಿದವು. ದೀಪಾ ಆಗಾಗ ಹಂಗಿಸುತ್ತಿದ್ದಳು: 'ನಿನಗ ಸ್ವಂತ ವ್ಯಕ್ತಿತ್ವ ಅನ್ನೂದ ಇಲ್ಲ. ನೀನು ನಿಮ್ಮ ಮಾಂವನ ಗುಲಾಮ ಆಗೀದಿ. ಅಷ್ಟೂ ತಿಳಿಯೂದಿಲ್ಲ ನಿನಗ? ಆವಾಗಿನ ಸಣ್ಣ ಹುಡುಗ ಅಲ್ಲ ನೀನು. ಬೆಳಿದಿದೀ, ತಿಳಕೋ. ಬರೀ ಭೂತಕಾಲದಾಗ ಜೀವನ ಮಾಡೋದು ಬಿಟ್ಟು ವರ್ತಮಾನಕ್ಕ ಬಾ. ಹಳೇದನ್ನ ಮಾತ್ರ ನನ್ನ ಮುಂದ ಯಾವತ್ತೂ ಹೇಳಬ್ಯಾಡ.' ನಾಗರಾಜನ ಜೊತೆ ತನ್ನ ಬಾಳ್ವೆಯೆನ್ನುವುದು ಹಳೆಯ ಮತ್ತು ಹೊಸದರ ನಡುವಿನ, ಹಳ್ಳಿ ಮತ್ತು ಶಹರದ ನಡುವಿನ ಒಂದು ಮುಗಿಯಲಾರದ ಸಂಘರ್ಷವಾಗಿ ದೀಪಾಳನ್ನು ಕಾಡುತ್ತಿತ್ತು.

ಹೆಂಡತಿಯೇನೋ ಹಾಗೆ ಹೇಳುತ್ತಿದ್ದಳು. ಆದರೆ ತಾನು ಆ ದಿನಗಳನ್ನು ಬಿಟ್ಟು ಬದುಕುವುದು ಸಾಧ್ಯವೇ? ನಾಗರಾಜನಿಗೆ ಅನಿಸುವುದು – ಸೋದರಮಾವನ ಕಿರುಬೆರಳು ಹಿಡಿದು ತಾನು ಈ ದಾರಿಯನ್ನು ಸವೆಸಿದ್ದೆ. ಹೊಳೆ ಹಳ್ಳ ದಾಟುವಾಗ ಅವನ ಹೆಗಲ ಮೇಲೆ ಕೂತಿದ್ದೆ. ಅವನ ಪಕ್ಕ ಕುಳಿತು ಬಂಡಿ ಓಡಿಸಿದ್ದೆ. ಶಂಕರಪ್ಪಮಾಮಾ ಕೂಡ ಅಷ್ಟೆ. ತನ್ನನ್ನು ಮುದ್ದಾಡುತ್ತಿದ್ದ. ಅದೆಲ್ಲ ಒಂದು ಕನಸಾಗಿತ್ತೇನೋ ಎನ್ನುವಷ್ಟು ತಾನು ಅದನ್ನೀಗ ಮರೆತಿದ್ದೇನೆ... ಮಾವ ಕೂಡ ಅಷ್ಟೇ ಅಲ್ಲವೆ? ಮುಂಜಾನೆ ಮನೆಯ ಹೊಸ್ತಿಲು ದಾಟುವ